ಅಸಲು ದಾವೆ ಸಂಖ್ಯೆ - 236/2021
ಡಿ.ಡಬ್ಲ್ಯೂ - 02
ದಿನಾಂಕ: 04-03-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ. ಎಂ ಎಂ ಪಿ ವಕೀಲರಿಂದ**

1 ನೇ ಪ್ರತಿವಾದಿ ನಿಮಗೆ ಏನಾಬೇಕು ಎಂದರೆ ಚಿಕ್ಕಮ್ಮನಾಗಬೇಕು. ಪ್ರತಿವಾದಿ 2 ರಿಂದ 4 ರವರು ನನ್ನ ಚಿಕ್ಕಪ್ಪನ ಮಕ್ಕಳು. ದಾವಾ ಆಸ್ತಿಯ ಜಮೀನಿನ ಬಳಿ ನಿಮ್ಮ ಜಮೀನು ಇದೆಯಾ ಎಂದರೆ ಸ್ವಲ್ಪ ದೂರದಲ್ಲಿ ಇದೆ. ನಿಮ್ಮ ಆಸ್ತಿಯ ಸರ್ವೆ ನಂ. ಎಷ್ಟು ಎಂದರೆ 18 ಇರುತ್ತದೆ. ದಾವಾ ಆಸ್ತಿಯ ಸರ್ವೆ ನಂ. 15/3 ಇರುತ್ತದೆ. ವಾದಿಗೆ ಮಕ್ಕಳು ಇಲ್ಲ ಎಂದರೆ ಸರಿ. ವಾದಿಯ ಗಂಡನು ತೀರಿಕೊಂಡಿದ್ದಾನೆ ಎಂದರೆ ಸರಿ. ವಾದಿಯರು ಯಾರ ಜೊತೆ ಇದ್ದಾರೆ ಎಂದರೆ ಅವರ ಚಿಕ್ಕಪ್ಪನ ಮಕ್ಕಳ ಜೊತೆ ಇರುತ್ತಾರೆ. ವಾದಿಯ ಆಸ್ತಿ ಎಷ್ಟು ಇದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ಆಸ್ತಿ ಎಷ್ಟು ಇದೆ ಎಂದರೆ 2 ಎಕರೆ 36 ಗುಂಟೆ ಇದೆ. ವಾದಿಯ ಜಮೀನು 1 ಎಕರೆ 14 ಗುಂಟೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ಅಧಿಕಾರಿಗಳು ಸರ್ವೆ ಮಾಡಿದ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಇಲ್ಲ. ಸರ್ವೆ ಮಾಡಿ ಅಧಿಕಾರಿಗಳು ಅಲ್ಲಿ ಒಂದು ಕಲ್ಲನ್ನುನಿಲ್ಲಿಸಿ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ವಾದಿಯರ ಜಮೀನಿನ 6 ಗುಂಟೆ ಜಮೀನನ್ನು ಅತೀಕ್ರಮಣ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು ಸರ್ವೆ ಅಧಿಕಾರಿಗಳು ವರದಿ ಸಲ್ಲಿಸಿದ್ದಾರೆ ಎಂದರೆ ಇರಬಹುದು. ಆ ಕಾರಣಕ್ಕಾಗಿ ಪ್ರತಿವಾದಿಯರು ಸದರಿ 6 ಗುಂಟೆಗೆ ಮಾಲೀಕರು ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಒತ್ತುವರಿ ಮಾಡಿದ ಬಗ್ಗೆ ತಹಶೀಲ್ದಾರ ನ್ಯಾಯಾಲಯದಲ್ಲಿ ಪ್ರಕರಣ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ಅಧಿಕಾರಿಗಳು ನಿಲ್ಲಿಸಿದ ಬಾಂದಗಲ್ಲನ್ನು ಪ್ರತಿವಾದಿಯರು ಕಿತ್ತು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರಮಾಣ ಪತ್ರ ಬರೆಯಲು ಯಾರು ಮಾಹಿತಿ ನೀಡಿದರು ಎಂದರೆ ನಾನೇ ನೀಡಿರುತ್ತೇನೆ. ಪ್ರತಿವಾದಿಯರು 6 ಗುಂಟೆ ಜಮೀನನ್ನು ಅತೀಕ್ರಮಣ ಮಾಡಿದ ವಿಷಯ ನಿಮಗೆ ಗೊತ್ತಿದ್ದರು ಸಹ ಪ್ರತಿವಾದಿಯರು ನಿಮ್ಮ ಸಂಬಂಧಿಕರು ಎಂದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯು ಒಬ್ಬಳೇ ಇರುವುದರಿಂದ ಅವರ ಹೊಲ ಎತ್ತಿ ಹಾಕುವ ಉದ್ದೇಶದಿಂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.